(ಇಂದು ದಿನಾಂಕ 28-02-2020 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು. ವಾದಿ ಈ ಪ್ರಕರಣದಲ್ಲಿ ಖರೀದಿ ಕರಾರುಗಳ ಬಾಬ್ತು ಮುದ್ರಾಂಕ ಕೊರತೆ ಶುಲ್ಕವನ್ನು ಪಾವತಿ ಮಾಡಿರುತ್ತಾನೆ.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ವಿ.ಎಸ್.ಎಸ್. ವಕೀಲರಿಂದ–**

ನಾನು ಈಗಾಗಲೇ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ನಿಶಾನೆ ಪಿ. 14 - ಖರೀದಿ ಕರಾರು ಪತ್ರ ದಿನಾಂಕ 05-01-2017 ರ ಅಸಲು ಪ್ರತಿ. ಸದ್ರಿ ದಾಖಲಾತಿಯಲ್ಲಿ ಸಾಕ್ಷಿದಾರರು ತಮ್ಮ ಹಾಗೂ ಪ್ರತಿವಾದಿಯ ಸಹಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದ್ರಿ ದಾಖಲಾತಿಯ ಕೊನೆಯ ಪುಟದಲ್ಲಿ ಇರುವ ಪ್ರತಿವಾದಿಯ ಸಹಿಯನ್ನು ಈಗ ನಿ.ಪಿ.14(ಎ) ಎಂತಲೂ, ಸಾಕ್ಷಿಯ ಸಹಿಯನ್ನು ನಿ.ಪಿ.14(ಬಿ) ಎಂದು ಗುರುತಿಸಲಾಯಿತು. ಸದ್ರಿ ದಾಖಲಾತಿಯ ಸಾಕ್ಷಿದಾರರ ಸಹಿಗಳನ್ನು ಗುರುತಿಸಿರುವ ಕಾರಣ ಅವುಗಳನ್ನು ಕ್ರಮವಾಗಿ ನಿ.ಪಿ. 14(ಸಿ) ಮತ್ತು 14(ಡಿ) ಎಂದು ಗುರುತಿಸಲಾಯಿತು.

ನಿಶಾನೆ ಪಿ. 15 - ಖರೀದಿ ಪುರವಣಿ ಕರಾರು ಪತ್ರ ದಿನಾಂಕ 07-09-2017 ರ ಅಸಲು ಪ್ರತಿ. ಸದ್ರಿ ದಾಖಲಾತಿಯಲ್ಲಿ ಸಾಕ್ಷಿದಾರರು ತಮ್ಮ ಹಾಗೂ ಪ್ರತಿವಾದಿಯ ಸಹಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದ್ರಿ ದಾಖಲಾತಿಯ ಕೊನೆಯ ಪುಟದಲ್ಲಿ ಇರುವ ಪ್ರತಿವಾದಿಯ ಸಹಿಯನ್ನು ಈಗ ನಿ.ಪಿ.15(ಎ) ಎಂತಲೂ, ಸಾಕ್ಷಿಯ ಸಹಿಯನ್ನು ನಿ.ಪಿ.15(ಬಿ) ಎಂದು ಗುರುತಿಸಲಾಯಿತು. ಸದ್ರಿ ದಾಖಲಾತಿಯಲ್ಲಿ ನೋಟರಿಯವರು ಮಾಡಿದ ಸಹಿಗಳನ್ನು ಗುರುತಿಸಿರುವ ಕಾರಣ ಅವುಗಳಲ್ಲಿ ಒಂದು ಸಹಿಯನ್ನು ನಿ.ಪಿ. 15(ಸಿ) ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ದಾವೆಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ